ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1284/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಆಂಜನೇಯ ಬಿ. | CW: 1 | PW: 1 |
| ತಂದೆಯ ಹೆಸರು | : | ಯಂಕಪ್ಪ | | |
| ವಯಸ್ಸು | : | 47 | | |
| ವೃತ್ತಿ | : | ಅಬಕಾರಿ ಉಪ ಅಧಿಕ್ಷಕರು, ಕೊಪ್ಪಳ ಉಪ ವಿಭಾಗ. | | |
| ವಾಸಸ್ಥಳ | : | ಕೊಪ್ಪಳ | | |

ದಿನಾಂಕಃ 21.06.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

2019 ಫೆಬ್ರವರಿ ತಿಂಗಳಿಂದ ಜೂನ್ 2019 ರವರೆಗೆ ಅಬಕಾರಿ ನಿರೀಕ್ಷಕರಾಗಿ ದಾವಣಗೆರೆಯ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.03.2019 ರಂದು ಲೋಕಾ ಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ತ, ಕುಂದೂರು ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಆಗ ನಾನು, ಚಾಸಾ.4 ಮತ್ತು 5 ರವರು ಶ್ಯಾಮನೂರು ಬಸ್ ನಿಲ್ದಾಣದ ಹತ್ತಿರ ಹೋಗಿ ಚಾಸಾ.4 ಮತ್ತು 5 ರವರ ಮೂಲಕ ಪಂಚರಾದ ಚಾಸಾ.2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಕುಂದೂರು ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟದ ಬಗ್ಗೆ ಹಾಗೂ ದಾಳಿಯ ಬಗ್ಗೆ ತಿಳಿಸಿ ಅದಕ್ಕೆ ಪಂಚರು ಒಪ್ಪಿಕೊಂಡಿದ್ದು ನಾವು ಚಾಸಾ.2 ರಿಂದ 5 ನಮ್ಮ ಇಲಾಖಾ ವಾಹನದ ನಂಬರ್ ಕೆಎ-17-ಜಿ-0555 ವಾಹನದಲ್ಲಿ ಕುಂದೂರು ಗ್ರಾಮಕ್ಕೆ ಹೋಗಿ, ಶೇಖರಪ್ಪ ಎಂಬುವರ ಮನೆಯ ಹತ್ತಿರ ವಿಚಾರಿಸಿದಾಗ, ಶೇಖರಪ್ಪ ರವರ ಮನೆಯ ಹಿಂಭಾಗ ಖಾಲಿ ಜಾಗದಲ್ಲಿ ಒಬ್ಬ ವ್ಯಕ್ತಿಯು 2 ರಟ್ಟಿನ ಪೆಟ್ಟಿಗೆಗಳನ್ನು ಇಟ್ಟುಕೊಂಡು ಕುಳಿತುಕೊಂಡಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿದಾಗ ನಮ್ಮ ಸಿಬ್ಬಂದಿಯವರು ಆತನನ್ನು ಹಿಡಿದುಕೊಂಡಿರುತ್ತಾರೆ.

ರಟ್ಟಿನ ಪೆಟ್ಟಿಗೆಯಲ್ಲಿ ಏನಿದೆ ಎಂದು ಸದರಿ ವ್ಯಕ್ತಿಯನ್ನು ಕೇಳಲಾಗಿ ಆತನು ಉತ್ತರಿಸಲು ನಿರಾಕರಿಸಿದಾಗ, ಶೋಧನಾ ಸಮೂಚಿತ ವಾರೆಂಟ್ ಅನ್ನು ತಯಾರಿಸಿ , ಸದರಿ ಪೆಟ್ಟಿಗೆಗಳಲ್ಲಿ ಏನಿದೆ ಎಂದು ನೋಡಲಾಗಿ ಮದ್ಯದ ಟೆಟ್ರಾ ಪ್ಯಾಕ್ ಗಳು ಇದ್ದವು. ಅವುಗಳನ್ನು ಎಣಿಸಲಾಗಿ 1 ರಟ್ಟಿನ ಪೆಟ್ಟಿಗೆಯಲ್ಲಿ ಹೈ ವರ್ಡ್ಸ್ ಚಿಯಾರ್ಸ ವಿಸ್ಕಿಯ 90 ಎಂ.ಎಲ್ ನ 46 ಟೆಟ್ರಾ ಪ್ಯಾಕ್ ಗಳು ಹಾಗೂ ಇನ್ನೊಂದು ರಟ್ಟಿನ ಪೆಟ್ಟಿಗೆಯಲ್ಲಿ ಬೆಂಗಳೂರು ಮಾಲ್ಟ್ ವಿಸ್ಕಿಯ 90 ಎಂ.ಎಲ್ ನ 90 ಟೆಟ್ರಾ ಪ್ಯಾಕ್ ಗಳು ಇದ್ದವು. ಒಟ್ಟು 12.240 ಲೀಟರ್ ನಷ್ಟು ಮದ್ಯ ಇರುತ್ತದೆ. ಮದ್ಯವನ್ನು ಹೊಂದಲು ಪರವಾನಿಗೆ ಇದೆಯೇ ಎಂದು ಸದರಿ ವ್ಯಕ್ತಿಯನ್ನು ಕೇಳಲಾಗಿ ಆತ ಇಲ್ಲ ಎಂದು ತಿಳಿಸಿರುತ್ತಾನೆ.

ಸದರಿ ವ್ಯಕ್ತಿಯ ಹೆಸರು, ವಿಳಾಸ ಕೇಳಲಾಗಿ ಶೇರಿಫ್ ಸಾಬ್ ತಂದೆ ಮೊಹಮ್ಮದ್ ಸಾಬ್, 52 ವರ್ಷ, ಕುಂದೂರು ಗ್ರಾಮ ಎಂದು ತಿಳಿಸಿರುತ್ತಾನೆ. ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳಿಂದ ಹೈ ವರ್ಡ್ಸ್ ಚಿಯಾರ್ಸ ವಿಸ್ಕಿಯ 90 ಎಂ.ಎಲ್ ನ 15 ಟೆಟ್ರಾ ಪ್ಯಾಕ್ ಗಳನ್ನು ಮತ್ತು ಬೆಂಗಳೂರು ಮಾಲ್ಟ್ ವಿಸ್ಕಿಯ 90 ಎಂ.ಎಲ್ ನ 15 ಟೆಟ್ರಾ ಪ್ಯಾಕ್ ಗಳನ್ನು ರಾಸಯಿನಿಕ ಪರೀಕ್ಷೆಗೆ ಮಾದರಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ ಸಣ್ಣ ಚೀಟಿಗಳನ್ನು ತಯಾರಿಸಿ ಅದಕ್ಕೆ ಪಂಚರ ಸಹಿಗಳನ್ನು ಮಾಡಿಸಿಕೊಂಡು ಮಾದರಿ ಮೊಹರಿನ ಸೀಲು ಹಾಕಿ ಪಂಚರ ಸಮಕ್ಷಮ ಬೆಳಿಗ್ಗೆ 9.15 ರಿಂದು 10.45 ಗಂಟೆಯ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿ ಮದ್ಯದ ಪ್ಯಾಕ್ ಗಳನ್ನು ಹಾಗೂ ಸದರಿ ಆಸಾಮಿಯನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಚಾಸಾ.2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ನಂತರ ಕಚೇರಿಗೆ ಬಂದು ಪ್ರಥಮ ವರ್ತಮಾನ ವರದಿಯನ್ನು ಮತ್ತು ಮಾಲು ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನ ಒಪ್ಪಿಸಿ ಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.7 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯ ಮುಂದಿರುವ ಹೈ ವರ್ಡ್ಸ್ ಚಿಯಾರ್ಸ ವಿಸ್ಕಿಯ 90 ಎಂ.ಎಲ್ ನ 15 ಟೆಟ್ರಾ ಪ್ಯಾಕ್ ಗಳನ್ನು ಮತ್ತು ಬೆಂಗಳೂರು ಮಾಲ್ಟ್ ವಿಸ್ಕಿಯ 90 ಎಂ.ಎಲ್ ನ 15 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು 30 ಟೆಟ್ರಾ ಪ್ಯಾಕ್ ಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

ಸಾಕ್ಷಿಯು ಜಪ್ತು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಜಪ್ತು ಪಂಚನಾಮೆಯನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು.

ಮಾದರಿ ಮೊಹರಿನ ನಕಲನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ಮಾಲು ಪಟ್ಟಿಯನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 (ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4 (ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀಎಸ್.ಕೆ. ವಕೀಲರಿಂದಃ-

ಕುಂದೂರು ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ ಯಾವ ಸಮಯಕ್ಕೆ ಮಾಹಿತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಸುಮಾರು 8.00 ಗಂಟೆ ಸಮಯಕ್ಕೆ ಎಂದು ನುಡಿಯುತ್ತಾರೆ. ನನಗೆ ಅಕ್ರಮ ಮದ್ಯ ಮಾರಾಟದ ಮಾಹಿತಿ ಬಂದಾಗ ನಾನು ಎಲ್ಲಿದ್ದೆ ಎಂದರೆ ಸಾಕ್ಷಿಯು ದಾವಣಗೆರೆಯ ಕಚೇರಿಯಲ್ಲಿ ಎಂದು ನುಡಿಯುತ್ತಾರೆ. ಕುಂದೂರು ಗ್ರಾಮವು ಹೊನ್ನಾಳಿ ವಲಯ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ಹೊನ್ನಾಳಿಯಲ್ಲಿಯು ಸಹ ನಮ್ಮ ಇಲಾಖೆಯ ಕಚೇರಿ ಇರುತ್ತದೆ ಎಂದರೆ ಸರಿ. ಸದರಿ ಅಕ್ರಮ ಮದ್ಯ ಮಾರಾಟದ ಮಾಹಿತಿಯನ್ನು ಹೊನ್ನಾಳಿ ಕಚೇರಿಯ ಅಧಿಕಾರಿಗಳಿಗೆ ಹೇಳಿದ್ದೀರಾ ಎಂದರೆ ಇಲ್ಲ. ಕುಂದೂರು ಗ್ರಾಮದಲ್ಲಿ ನನಗೆ ನಿಕರವಾಗಿ ಯಾವ ಜಾಗದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರಲಿಲ್ಲ ಎಂದರೆ ಸಾಕ್ಷಿಯು ಶೇಖರಪ್ಪ ರವರ ಮನೆಯ ಹತ್ತಿರ ಎಂದು ಮಾಹಿತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.1 ಜಪ್ತು ಪಂಚನಾಮಯಲ್ಲಾಗಲಿ ನಮ್ಮ ತನಿಖೆಯಲ್ಲಾಗಲಿ ನಿಕರವಾಗಿ ಶೇಖರಪ್ಪ ರವರ ಮನೆಯ ಹತ್ತಿರ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂಬುದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಶೇಖರಪ್ಪ ರವರ ಮನೆ ಎಲ್ಲಿದೆ ಎಂದು ಯಾರು ನಮಗೆ ತಿಳಿಸಿರುತ್ತಾರೆ ಮತ್ತು ಸದರಿ ಮನೆಯನ್ನು ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಹೇಳಿದವರು ಅವರ ಹೆಸರನ್ನು ನಮಗೆ ತಿಳಿಸಲಿಲ್ಲ ಎಂದು ನುಡಿಯುತ್ತಾರೆ. ಸದರಿ ಮಾಹಿತಿ ನೀಡಿದವರು ಅವರ ಹೆಸರನ್ನು ನಮಗೆ ತಿಳಿಸಲಿಲ್ಲ ಎಂದು ಮಹಜರ್ ನಲ್ಲಾಗಲಿ ಅಥವಾ ನನ್ನ ತನಿಖೆಯಾಲ್ಲಾಗಲಿ ನಮೂದಿಸಿಲ್ಲ ಎಂದರೆ ಸರಿ. ಶೇಖರಪ್ಪ ರವರ ಮನೆ ಇಂತಹದ್ದೆ ಎಂದು ಗ್ರಾಮ ಪಂಚಾಯಿತಿ ಕಡೆಯಿಂದ ಖಚಿತಪಡಿಸಿಕೊಂಡಿದ್ದೀರಾ ಎಂದರೆ ಇಲ್ಲ. ಶೇಖರಪ್ಪ ರವರ ಮನೆಯವರನ್ನು ಮತ್ತು ಪಕ್ಕದ ಮನೆಯವರನ್ನು ಅಕ್ರಮ ಮದ್ಯ ಮಾರಾಟದ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಇಲ್ಲ. ಶೇಖರಪ್ಪ ರವರ ಮನೆಯ ಯಾವ ದಿಕ್ಕಿಗೆ ರಸ್ತೆ ಇದೆ ಎಂದರೆ ಉತ್ತರ ದಿಕ್ಕಿಗೆ ಎಂದು ನುಡಿಯುತ್ತಾರೆ. ಶೇಖರಪ್ಪ ರವರ ಮನೆಯ ಯಾವ ದಿಕ್ಕಿಗೆ ಆರೋಪಿಯು ಮದ್ಯದ ಪೆಟ್ಟಿಗೆಗಳನ್ನು ಇಟ್ಟಿಕೊಂಡಿದ್ದನು ಎಂದರೆ ಸಾಕ್ಷಿಯು ಮನೆಯ ಮುಂದೆ ಪೂರ್ವ ದಿಕ್ಕಿನ ಖಾಲಿ ಜಾಗದಲ್ಲಿ ಎಂದು ನುಡಿಯುತ್ತಾರೆ.

ಕುಂದೂರು ಗ್ರಾಮದಲ್ಲಿ ಶೇಖರಪ್ಪ ಎಂಬುವರಿಗೆ ಸಂಬಂಧಿಸಿದ ಯಾವುದೇ ಮನೆ ಮತ್ತು ಖಾಲಿ ಜಾಗ ಇಲ್ಲ ಎಂದರೆ ಸರಿಯಲ್ಲ. ಶೇಖರಪ್ಪ ಎಂಬುವರಿಗೆ ಮನೆ ಮತ್ತು ಖಾಲಿ ಜಾಗ ಇದೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಕೊಟ್ಟಿಲ್ಲ ಮುಂದಿನ ತನಿಖಾಧಿಕಾರಿಗಳು ಅದರ ಬಗ್ಗೆ ತನಿಖೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮುಂದಿನ ತನಿಖಾಧಿಕಾರಿಗಳು ಶೇಖರಪ್ಪರವರ ಮನೆಯ ಬಗ್ಗೆ ತನಿಖೆ ಮಾಡಿರುವ ಬಗ್ಗೆ ಗೊತ್ತಿದೆಯಾ ಎಂದರೆ ಗೊತ್ತಿಲ್ಲ. ಮುದ್ದೆ ಮಾಲೀನ ಟೆಟ್ರಾ ಪ್ಯಾಕ್ ಗಳ ಮೇಲೆ ಯಾರು ಬರವಣಿಗೆಯನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ.4 ರವರು ಎಂದು ನುಡಿಯುತ್ತಾರೆ. ಮದ್ದೆ ಮಾಲೀನ ಟೆಟ್ರಾ ಪ್ಯಾಕ್ ಗಳ ಮೇಲೆ ಚಾಸಾ.4 ರವರು ಎಲ್ಲಾ ಬರವಣಿಗೆಗಳನ್ನು ಯಾವಾಗ ಮತ್ತು ಎಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿ ಎಂದು ನುಡಿಯುತ್ತಾರೆ. ಟೆಟ್ರಾ ಪ್ಯಾಕ್ ಗಳನ್ನು ಕಚೇರಿಗೆ ತೆಗೆದುಕೊಂಡು ಹೋದ ನಂತರ ಅವುಗಳ ಮೇಲೆ ಮತ್ತೆ ಏನಾದರೂ ಬರವಣಿಗೆ ಮಾಡಿದ್ದೀರಾ ಎಂದರೆ ಇಲ್ಲ.

ನಿಪಿ.4 ಪ್ರಥಮಾ ವರ್ತಮಾನ ವರದಿಯನ್ನು ಯಾವಾಗ ಹಾಕಿರುತ್ತೀರಿ ಎಂದರೆ ಸಾಕ್ಷಿಯು ಮಧ್ಯಾಹ್ನ ಸುಮಾರು 1 ರಿಂದ 2 ಗಂಟೆಯಲ್ಲಿ ಎಂದು ನುಡಿಯುತ್ತಾರೆ. ಮುದ್ದೆ ಮಾಲುಗಳನ್ನು ಕಚೇರಿಗೆ ತೆಗೆದುಕೊಂಡು ಹೋದ ನಂತರ ಪುನಃ ತೆಗೆದು ನೋಡಿದ್ದೀರಾ ಎಂದರೆ ಇಲ್ಲ. ದಾಳಿಗೆ ಹೋಗುವ ಸಮಯದಲ್ಲಿ ಎಫ್.ಐ.ಆರ್ ನಂಬರ್ ಗಳು ಮೊದಲೇ ಗೊತ್ತಿರುತ್ತಾದಾ ಎಂದರೆ ಹೌದು . ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲೀನ ಎಲ್ಲಾ ಟೆಟ್ರಾ ಪ್ಯಾಕ್ ಗಳ ಮೇಲೆಯು ಎಫ್.ಐ.ಆರ್ ನಂಬರ್ ಇದೆ ಎಂದರೆ ಸರಿ. ಅಕ್ರಮ ಮಧ್ಯ ಮಾರಾಟದ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಹಾಗೂ ನಾನು ಕುಂದೂರು ಗ್ರಾಮಕ್ಕೆ ದಾಳಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ದಾಳಿಗೆ ಸಹಕರಿಸುವಂತೆ ಚಾಸಾ.2 ಮತ್ತು 3 ರವರಿಗೆ ನೋಟೀಸು ನೀಡಿದ್ದೀರಾ ಎಂದರೆ ಇಲ್ಲ. ನಿಪಿ.1 ಪಂಚನಾಮೆಯನ್ನು ಯಾರು ಹೇಳಿದಂತೆ ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ.2 ಮತ್ತು 3 ರವರು ಹೇಳಿದಂತೆ ನಾನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಕುಂದೂರು ಗ್ರಾಮದಲ್ಲಿ ದಾಳಿಗೆ ಹೋಗಿ ನಾನು ಆರೋಪಿಯನ್ನು ಮತ್ತು ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳು ಆರೋಪಿಯ ಕಡೆಯಿಂದ ಸಿಕ್ಕಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಪೆಟ್ಟಿಗೆಗಳಿಂದ ತಲಾ 15 ಟೆಟ್ರಾ ಪ್ಯಾಕ್ ಗಳನ್ನು ರಾಸಾಯಿನಿಕ ಪರೀಕ್ಷೆಗೆ ಮಾದರಿ ತೆಗೆದು ಪಂಚರಿಂದ ಸಹಿ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಮಾಡಿರುವ ಬಗ್ಗೆ ಯಾವುದೇ ವಿಡಿಯೋ ಮಾಡಿಲ್ಲ ಎಂದರೆ ಸರಿ. ಮುದ್ದೆ ಮಾಲುಗಳನ್ನು ಹೊರತು ಪಡಿಸಿ ಉಳಿದ ಮಧ್ಯದ ಟೆಟ್ರಾ ಪ್ಯಾಕ್ ಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ಸದರಿ ಟೆಟ್ರಾ ಪ್ಯಾಕ್ ಗಳ ಮೇಲೆ ಪಂಚರ ಸಹಿಗಳನ್ನು ಪಡೆದುಕೊಂಡಿದ್ದೀರಾ ಹಾಗೂ ಪಂಚನಾಮೆಯಾಲ್ಲಾಗಲಿ

ತನಿಖೆಯಾಲ್ಲಾಗಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಬರುವುದಿಲ್ಲ ಎಂದು ನುಡಿಯುತ್ತಾರೆ.

ಘಟನಾ ಸ್ಥಳದಲ್ಲಿ ನಿಪಿ.1 ರಂತೆ ಪಂಚನಾಮೆ ಮಾಡಿಲ್ಲ ಹಾಗೂ ಎಂ.ಒ.1 ರಂತೆ ಯಾವುದೇ ಮದ್ಯದ ಪ್ಯಾಕ್ ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಮುದ್ದೆ ಮಾಲಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ.1 ಮಹಜರ್ ನಲ್ಲಿ ಹಾಗೂ ಮುದ್ದೆ ಮಾಲುಗಳ ಮೇಲೆ ಮದ್ಯದ ಪ್ಯಾಕ್ ಗಳ ಬ್ಯಾಚ್ ನಂಬರ್ ಗಳನ್ನು ನಮೂದಿಸಿಲ್ಲ ಎಂದರೆ ಸರಿ. ಮುದ್ದೆ ಮಾಲುಗಳು ಎಲ್ಲಿಂದ ಖರೀದಿಸ್ವಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ. ಚುನಾವಣಾ ಸಮಯದಲ್ಲಿ ಇಲಾಖೆಯ ಪ್ರಕರಣಗಳನ್ನು ಹೆಚ್ಚಿಸುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.